

ಸರ್ ಮಾರ್ಕ್ ಕಬ್ಬನ್

## ಬ್ರಿಟಿಷರು ರೂಪಿಸಿದ್ದ ಉದ್ಯಾನವನ

'ಬೆಂಗಳೂರು ಸಮಶೀತೋಷ್ಣವಲಯದ ಪ್ರದೇಶವಾದ್ದರಿಂದ, ಶೀತವಲಯದಲ್ಲಿ ಬೆಳೆಯುವ ಹಣ್ಣು–ಹೂ ಮೊದಲಾದ ಗಿಡಗಳನ್ನು ಬೆಳೆಸಲು ನಂದಿ ಗಿರಿಧಾಮ ಮತ್ತು ಕೆಮ್ಮಣ್ಣುಗುಂಡಿಯನ್ನು ಆಯ್ಕೆ ಮಾಡಿಕೊಂಡು, ಈ ಎರಡೂ ಗಿರಿಧಾಮಗಳನ್ನು ಸರ್ಕಾರಿ ಉದ್ಯಾನ ಇಲಾಖೆಗೆ ಮಾರ್ಕ್ ಕಬ್ಬನ್ ಸೇರಿಸಿದ್ದರು. ಈ ಇಲಾಖೆಯೇ ಮುಂದೆ ತೋಟಗಾರಿಕಾ ಇಲಾಖೆಯಾಯಿತು. ಬೋಳುಗುಡ್ಡವಾಗಿದ್ದ ನಂದಿಬೆಟ್ಟದಲ್ಲಿ ಉದ್ಯಾನವನವನ್ನು ರೂಪಿಸಿದ್ದು ಬ್ರಿಟಿಷರು. 17ನೇ ಶತಮಾನದಲ್ಲಿ ಕರ್ನಲ್ ಕುಪ್ಪೇಜ್ ಮೊಟ್ಟಮೊದಲು ಯೂರೋಪಿನಲ್ಲಿ ಬೆಳೆಯುತ್ತಿದ್ದ ಗಿಡಗಳನ್ನು ತರಿಸಿ ನಂದಿ ಬೆಟ್ಟದ ಮೇಲೆ ನೆಡಿಸಿ ಉದ್ಯಾನವನವನ್ನು ಮಾಡಿದ್ದರು. ಈಗಲೂ ಅಮೃತಸರೋವರದ ಹಿಂಭಾಗದಲ್ಲಿ ಎರಡೂವರೆ ಶತಮಾನದಷ್ಟು ಹಳೆಯ ಮರಗಳಿರುವ ಕುಪ್ಪೇಜ್ ಉದ್ಯಾನವನವನ್ನು ನೋಡಬಹುದಾಗಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಮೊಟ್ಟಮೊದಲು ಆಲೂಗಡ್ಡೆಯನ್ನು ಪರಿಚಯಿಸಿ ಸ್ಥಳೀಯ ರೈತರಿಗೆ ಬೆಳೆಯಲು ಪ್ರೋತ್ಸಾಹಿಸಿದ ಹೆಗ್ಗಳಿಗೆ ಸಹ ಕರ್ನಲ್ ಕುಪ್ಪೇಜ್‌ಗೆ ಸಲ್ಲುತ್ತದೆ. ತಮ್ಮ ಮೂಲ ನೆಲೆಯ ಹವಾಮಾನವು ನಂದಿಬೆಟ್ಟದಲ್ಲಿದ್ದುದರಿಂದ ಬ್ರಿಟಿಷ್ ಅಧಿಕಾರಿಗಳಿಗೆ ಬಹುಶಃ ಇದು ಹೆಚ್ಚು ಆಕರ್ಷಿಸಿತ್ತೇನೋ' ಎಂದು ತೋಟಗಾರಿಕಾ ಇಲಾಖೆಯ ನಿವೃತ್ತ ಅಧಿಕಾರಿ ಭಕ್ತರಹಳ್ಳಿ ಸಂತೆ ನಾರಾಯಣಸ್ವಾಮಿ ಹೇಳುತ್ತಾರೆ.

ಕರ್ನಾಟಕದ ಹೆಸರಾಂತ ಗಿರಿಧಾಮ ನಂದಿ ಬೆಟ್ಟದ ಮೇಲಿರುವ 'ಕಬ್ಬನ್ ಹೌಸ್' ನಿರ್ಮಾಣವಾಗಿ 179 ವರ್ಷ ಸಂದಿದೆ. ಅದನ್ನೀಗ 2 ಕೋಟಿ ರೂಪಾಯಿ ವೆಚ್ಚದಲ್ಲಿ ನವೀಕರಣಗೊಳಿಸಲಾಗಿದೆ. ಸುಮಾರು ಒಂದೂ ಮುಕ್ಕಾಲು ಶತಮಾನದ ಇತಿಹಾಸವನ್ನು ತನ್ನೊಡಲಿನಲ್ಲಿ ಇರಿಸಿಕೊಂಡಿರುವ ಈ ಐತಿಹಾಸಿಕ ಕಟ್ಟಡ, ನಂದಿ ಬೆಟ್ಟದ ಎತ್ತರದ ಸ್ಥಳದಲ್ಲಿ ಕುಳಿತು ತನ್ನ ಕಣ್ಣ ಮುಂದೆ ನಡೆದ ಘಟನೆಗಳಿಗೆ ಸಾಕ್ಷಿಯಾಗಿದೆ. ಗಣ್ಯರು, ಜನಸಾಮಾನ್ಯರು, ಹಕ್ಕಿಗಳು, ಸಸ್ಯಸಂಕುಲಗಳು, ಪ್ರಾಕೃತಿಕ ಹಾಗೂ ಮಾನವನ ಹಸ್ತಕ್ಷೇಪದಿಂದಾದ ಬದಲಾವಣೆಗಳು ಎಲ್ಲವನ್ನೂ ಮೌನವಾಗಿ ನೋಡುತ್ತಿದೆ.

ಬೆಂಗಳೂರಿನಲ್ಲಿ 'ಕಮೀಷನರ್ ಬಂಗಲೆ' ಅಂದರೆ ಈಗಿನ 'ರಾಜಭವನ'ವನ್ನು 1840ರಲ್ಲಿ ನಿರ್ಮಿಸಲಾಯಿತು. ಬೃಹತ್ತಾದ, ಭವ್ಯವಾದ, ಅತ್ಯಾಕರ್ಷಕ ವಾಸ್ತುಶಿಲ್ಪದ, ಅಂಡಾಕಾರದ ಮರದ ನೆಲಹಾಸನ್ನು ಹೊಂದಿದ ದರ್ಬಾರ್ ಹಾಲ್ ಒಳಗೊಂಡಿರುವ ಈ ಬಂಗಲೆಯು ಅಂದಿನ ಮೈಸೂರು ಸಂಸ್ಥಾನದ ಕಮೀಷನರ್ ಸರ್ ಮಾರ್ಕ್ ಕಬ್ಬನ್ ಅವರ ಅಧಿಕೃತ ನಿವಾಸವಾಗಿತ್ತು. ಈ ಶೈಲಿಯ ಕಟ್ಟಡದ ಕುರಿತಾದ ಆತನ ಅಭಿರುಚಿಗೆ ಉದಾಹರಣೆಯಾಗಿ ನಂದಿ ಬೆಟ್ಟದ ಮೇಲೆ 'ಕಬ್ಬನ್ ಹೌಸ್' ಇದೆ. ಅದೇ ವರ್ಷ, ಅಂದರೆ 1840ರಲ್ಲಿ ಅವರು ತಮ್ಮ ಎರಡನೇ ಅಧಿಕೃತ ನಿವಾಸವಾಗಿ 'ಕಬ್ಬನ್ ಹೌಸ್' ನಿರ್ಮಿಸಿದರು. ಕಬ್ಬನ್, ಬೇಸಿಗೆಯ 3–4 ತಿಂಗಳು ನಂದಿ ಬೆಟ್ಟದ 'ಕಬ್ಬನ್ ಹೌಸ್'ನಲ್ಲಿದ್ದುಕೊಂಡೇ ಆಡಳಿತ ನಡೆಸುತ್ತಿದ್ದರು. ಇದೆಲ್ಲ ಮಾಹಿತಿ 'ಎ ಪ್ಯಾಸೇಜ್ ಫ್ರಮ್ ರೆಸಿಡೆನ್ಸಿ ಟು ರಾಜಭವನ್' ಕೃತಿಯಲ್ಲಿ ಲಭ್ಯವಿದೆ.

### 'ಕಬ್ಬನ್ ಹೌಸ್' ಮಾರಾಟ

ಆರೋಗ್ಯ ಕ್ಷೀಣಿಸುತ್ತಿದ್ದಂತೆ 'ಇನ್ನು ನನ್ನ ಕಾಲ ಮುಗಿಯಿತು, ಅಪ್ಪಣೆ ಕೊಡಿ' ಎನ್ನುತ್ತಾ ಕಬ್ಬನ್ 1861ರಲ್ಲಿ ಕಮೀಷನರ್ ಪದವಿಗೆ ರಾಜೀನಾಮೆಯನ್ನಿತ್ತು, ತನ್ನ ಮೂಲ ಸ್ಥಳ 'ಐಸಲ್ ಆಫ್ ಮ್ಯಾನ್'ಗೆ ಹೊರಡುತ್ತಾರೆ. ನಂದಿ ಬೆಟ್ಟದ ಮೇಲೆ ಕಲ್ಯಾಣಿಯ ಪಕ್ಕದಲ್ಲಿ ಸ್ವಲ್ಪ ಸ್ಥಳವನ್ನು ಹೊಂದಿದ್ದು, ಹೋಟೆಲ್ ನಡೆಸುತ್ತಿದ್ದ ಜಿ.ಜಿ. ಬ್ರೌನ್ ಎಂಬ ಬ್ರಿಟಿಷ್ ಮೂಲದ ವ್ಯಕ್ತಿ, 'ಕಬ್ಬನ್ ಹೌಸ್' ಸೇರಿದಂತೆ ಸುತ್ತಮುತ್ತಲಿನ ಸ್ಥಳವನ್ನು ಸರ್ ಮಾರ್ಕ್ ಕಬ್ಬನ್ ಅವರು ಹೊರಡುವ ಮುನ್ನ ಕೊಂಡುಕೊಂಡರು. ಹಾಗಾಗಿ ಆ ಕಾಲಘಟ್ಟದಲ್ಲಿ 'ಬ್ರೌನ್ಸ್ ಪ್ರಾಪರ್ಟಿ' ಅಥವಾ 'ಬ್ರೌನ್ಸ್ ಲಾಡ್ಜ್' ಎಂದು ಈ ಕಟ್ಟಡವನ್ನು ಕರೆಯಲಾಗುತ್ತಿತ್ತು. ನಂತರ 1892ರಲ್ಲಿ ಸರ್ಕಾರ ಜಿ.ಜಿ. ಬ್ರೌನ್ ಗೆ 15 ಸಾವಿರ ರೂಪಾಯಿ ನೀಡಿ ಅವರಿಂದ 'ಕಬ್ಬನ್ ಹೌಸ್' ಹಾಗೂ ಸುತ್ತಮುತ್ತಲಿನ ಸ್ಥಳವನ್ನು ಖರೀದಿಸಿತು. ಇದರೊಂದಿಗೆ ಬೆಟ್ಟದ ಮೇಲಿನ ಎಲ್ಲಾ ಕಟ್ಟಡಗಳು ಮತ್ತು ಆಸ್ತಿಗಳು ಸರ್ಕಾರದ ಸ್ವತ್ತಾಯಿತು. ಆದರೆ ಜಾನ್ ಗ್ಯಾರೆಟ್ ಅವರಿಗೆ ಸೇರಿದ್ದ ಒಂದು ಸಣ್ಣ ಕಟ್ಟಡ ಮಾತ್ರ ಅವರ ಹೆಸರಿನಲ್ಲಿಯೇ ಉಳಿದಿತ್ತು. ಬೆಂಗಳೂರಿನಲ್ಲಿ ಬ್ರಿಟಿಷ್ ಕಾಲದಲ್ಲಿ ಶಿಕ್ಷಣ ನಿರ್ದೇಶಕರಾಗಿದ್ದ ಜಾನ್ ಗ್ಯಾರೆಟ್ ಅವರ ಪತ್ನಿಯ ಸಮಾಧಿ ಸಹ ಭೋಗನಂದೀಶ್ವರಸ್ವಾಮಿ ದೇವಾಲಯದ ಆಸುಪಾಸಿನಲ್ಲಿಯೇ ಇದೆ.

### ನೆಹರು ನಿಲಯ

1989ರಲ್ಲಿ ನೆಹರು ಜನ್ಮಶತಮಾನೋತ್ಸವದ ಸಂದರ್ಭದಲ್ಲಿ 'ನೆಹರು ನಿಲಯ' ಎಂದು 'ಕಬ್ಬನ್ ಹೌಸ್'ಗೆ ಮರು ನಾಮಕರಣ ಮಾಡಲಾಯಿತು. 1986ರ ನವೆಂಬರ್ 15 ಮತ್ತು 16ರಂದು ಈ ಶ್ವೇತವರ್ಣದ ಕಟ್ಟಡದಲ್ಲಿ ಐತಿಹಾಸಿಕ 2ನೇ ಸಾರ್ಕ್ ಶೃಂಗಸಭೆ ನಡೆದಿತ್ತು. ಆಗಿನ ಭಾರತದ ಪ್ರಧಾನಿ ರಾಜೀವ್ ಗಾಂಧಿ ಜೊತೆ ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾ, ನೇಪಾಳ, ಅಫ್ಘಾನಿಸ್ತಾನ, ಭೂತಾನ್ ದೇಶದ ಪ್ರಧಾನಿ, ಅಧ್ಯಕ್ಷರು ನಂದಿ ಗಿರಿಧಾಮಕ್ಕೆ ಭೇಟಿ ಕೊಟ್ಟು ನೆಹರು ನಿಲಯದಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳ ನಡುವೆ ಪ್ರಾದೇಶಿಕ ಸಹಕಾರದ ಕುರಿತು ಹಲವು ಐತಿಹಾಸಿಕ ಒಡಂಬಡಿಕೆಗಳನ್ನು ಮಾಡಿಕೊಂಡಿದ್ದರು.

### ಬಂಗಲೆಯ ನವೀಕರಣ

ಬ್ರಿಟಿಷ್ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ಬಂಗಲೆಯಲ್ಲಿ 4 ಸೂಟ್, 12 ಡಿಲಕ್ಸ್ ಕೊಠಡಿಗಳು ಮತ್ತು 6 ಕಾಟೇಜ್ ಸೇರಿದಂತೆ 22 ಕೊಠಡಿಗಳಿವೆ. ಅಲ್ಲಲ್ಲಿ ಸೋರುತ್ತಿದ್ದ ಕಟ್ಟಡದ ಸೂರನ್ನು ಇದೀಗ ಜಲನಿರೋಧಕ ಬಳಸಿ ರಿಪೇರಿ ಮಾಡಲಾಗಿದೆ. ಹಳೆಯ ಶೈಲಿಯ ಶೌಚ–ಬಚ್ಚಲು ಮನೆಗಳನ್ನು ಹೊಸ ಕಾಲಕ್ಕೆ ತಕ್ಕಂತೆ ಬದಲಾಯಿಸಲಾಗಿದೆ. ನೆಲಹಾಸಿನ ಟೈಲ್ಸ್‌ಗಳನ್ನು ಬದಲಾಯಿಸಲಾಗಿದೆ. ಬಾಗಿಲು, ಕಿಟಕಿಗಳಿಗೆ ಬಳಿದಿದ್ದ ಬಿಳಿ ಬಣ್ಣ ಒರೆಸಿ ಕಟ್ಟಿಗೆಯು ಮೂಲಸ್ವರೂಪದಲ್ಲಿ ಹೊಳೆಯುವಂತೆ ಪಾಲಿಷ್ ಹಾಕಲಾಗಿದೆ. ಪೀಠೋಪಕರಣಗಳನ್ನು ಬದಲಾಯಿಸಿ, ಕೊಠಡಿಗಳು ಮತ್ತು ವರಾಂಡದಲ್ಲಿ ಅಪರೂಪದ ಚಿತ್ರಗಳನ್ನು, ಕಲಾಕೃತಿಗಳನ್ನು ಅಳವಡಿಸಲಾಗಿದೆ. ನೆಹರೂ, ಸರ್ವಪಲ್ಲಿ ರಾಧಾಕೃಷ್ಣ ಅವರು ಬೆಟ್ಟಕ್ಕೆ ಭೇಟಿ ನೀಡಿದ ಚಿತ್ರಗಳು, ಬೆಟ್ಟಕ್ಕೆ ಬಂದಿದ್ದ ಮಹಾತ್ಮ ಗಾಂಧೀಜಿ, ರಾಷ್ಟ್ರಕವಿ ಕುವೆಂಪು ಅವರ ದಾಖಲಿಸಿದ ಅಭಿಪ್ರಾಯಗಳು ಇಲ್ಲಿ ನೋಡಲು ಸಿಗುತ್ತವೆ. ■